
# ಸ್ವಲ್ಪ ಗಮನಿಸಿ



ವಾಗೀಶ ಹೆಗಡೆ

ಯಾರೋ ಲೂಟಿ ಮಾಡಿದಂತೆ
ಈ ಶಹರದ ಜನ
ಮತ್ತು ಪೇಟೆಗಳು ಕಂಗೆಟ್ಟಿವೆ
ಆಸ್ಪತ್ರೆಗಳಲ್ಲಿ ಯಾರು ಕಾಣುತ್ತಿಲ್ಲ
ಹಟಮಾರಿ ಬಜಾರಿನೊಳಗೆ
ಎಂದಿನ ಸಂಭ್ರಮವಿಲ್ಲ

ಭಗ್ನ ಶಿಲೆಗಳಿಗೆಲ್ಲಾ ಮತ್ತೆ
ಮರುರೂಪ ಬಂದು
ತಮ್ಮಷ್ಟಕ್ಕೆ ತಾವು ಬೆಟ್ಟ
ಗುಡ್ಡಗಳಿಗೆ ಅಂಟಿಕೊಂಡಿವೆ
ಎಲ್ಲಾ ಬಗೆಯ ಹೂವುಗಳು
ವಿಳಾಸ ಮರೆತು ಅಲೆಯುವ ಹಾಗೆ
ದೇಶಗಳನ್ನು ಬದಲಾಯಿಸುತಿವೆ

ಸುಟ್ಟು ಹೋದ ನಾಣ್ಯದಂತೆ
ಕನ್ನಡಿಗಳೆಲ್ಲಾ ಸೋತು
ಉಗ್ರ ಬಿಸಿಲಿಗೆ ಎದೆಯನ್ನು ಹರಡಿವೆ
ಅದರೊಳಗಿನ ತೀವ್ರ ಅಸಹನೆ
ಮೂಕ ಭಾವ
ಮಿಠಾಯಿಗೆ ರಚ್ಚೆ ಹಿಡಿದ ಮಗುವಿನದೆ!

ಒಂದು ಮಹಾ ಮಳೆಗೆ
ಎಲೆಯ ಚಿಗುರು ತನ್ನ ತುಟಿ
ತೆರೆದು ಕಾಯುತಿದೆ
ತುರ್ತಿಗಾಗಿ ಬರೆದ ಪತ್ರಗಳು
ಕೆಂಪು ಡಬ್ಬಿಯೊಳಗಿನ
ಕಡು ಕತ್ತಲನ್ನೆ ಕುಡಿದು ಬೆಳಕಿಗಾಗಿ
ಮುಗಿಲಿಗೆ ಮೊರೆಯಿಡುತಿವೆ

ಯಾರದರೂ ಎಚ್ಚರಿಸಿ
ಈ ಶಹರವನ್ನು
ಕಣ್ಣು ತೆರೆದು ನೋಡಲಿ
ಹಕ್ಕಿಗಳು ತಮ್ಮ ರೆಕ್ಕೆ ಕಳಚಿಕೊಂಡು
ದಿಗಂತ ದಾಟುತ್ತಿರುವುದನ್ನು.

● **ಶಶಿ ತರೀಕೆರೆ**